International Journal of Kannada Research
www.kannadajournal.com

ISSN: 2454–5813
IJKR 2022; 8(3): 33-35
© 2022 IJKR
www.kannadajournal.com
Received: 12-06-2022
Accepted: 16-07-2022

**ಶ್ರೀಕಾಂತ್ ಎಂ. ಕುಸೂರ**
ಸಂಶೋಧನಾ ವಿದ್ಯಾರ್ಥಿ
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ ಆವರಣ, ಬೆಂಗಳೂರು, ಕರ್ನಾಟಕ, ಭಾರತ

**ಡಾ.ಬಿ ಶೈಲಶ್ರೀ**
ಮಾರ್ಗದರ್ಶಕರು, ಎಂ.ಎಸ್, ಎಂ ಫಿಲ್, ಪಿಎಚ್‌ಡಿ ಸಹ ಪ್ರಾಧ್ಯಾಪಕರು
ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ಬೆಂಗಳೂರು ವಿಶ್ವವಿದ್ಯಾನಿಲಯ
ಜ್ಞಾನಭಾರತಿ ಆವರಣ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಶ್ರೀಕಾಂತ್ ಎಂ. ಕುಸೂರ**
ಸಂಶೋಧನಾ ವಿದ್ಯಾರ್ಥಿ
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ ಆವರಣ, ಬೆಂಗಳೂರು, ಕರ್ನಾಟಕ, ಭಾರತ

# ಸಮುದಾಯದ ದನಿಯಾದ 'ನಮ್ಮ ಧ್ವನಿ' ಸಮುದಾಯ ರೇಡಿಯೋ

**ಶ್ರೀಕಾಂತ್ ಎಂ. ಕುಸೂರ, ಡಾ.ಬಿ ಶೈಲಶ್ರೀ**

ಭಾರತದಂತಹ ಹೆಚ್ಚು ಹಳ್ಳಿಗಳೇ ಇರುವ ದೇಶದಲ್ಲಿ ಮಾಧ್ಯಮಗಳದ್ದು ಸವಾಲಿನ ಕೆಲಸ. ಗ್ರಾಮಗಳಲ್ಲಿ ಅಕ್ಷರಸ್ಥರ ಸಂಖ್ಯೆ ಕಡಿಮೆ. ಅನಕ್ಷರಸ್ಥರನ್ನು ತಲುಪಬೇಕೆಂದರೆ ಮುದ್ರಣ ಮಾಧ್ಯಮಕ್ಕಿಂತ ವಿದ್ಯುನ್ಮಾನ ಮಾಧ್ಯಮವೇ ಪರಿಣಾಮಕಾರಿಯಾದ ಮಾಧ್ಯಮ. ಈ ನಿಟ್ಟಿನಲ್ಲಿ ಜನಸ್ನೇಹಿ ಮತ್ತು ಸರಳ ಮಾಧ್ಯಮವೆನಿಸಿಕೊಂಡಿರುವ ಸಮುದಾಯ ಬಾನುಲಿಗಳ ಪಾತ್ರ ದೊಡ್ಡದು.

ಗ್ರಾಮದ ಅಥವಾ ಸಮುದಾಯದ ಎಲ್ಲ ವರ್ಗದವರನ್ನು ಗಮನದಲ್ಲಿಟ್ಟುಕೊಂಡು ಎಲ್ಲರಿಗೂ ಅವಶ್ಯವಾದ ಮಾಹಿತಿಗಳನ್ನು ರವಾನಿಸುತ್ತ ಇಡೀ ಸಮುದಾಯದ ಸರ್ವತೋಮುಖ ಅಭಿವೃದ್ದಿಗಾಗಿ ಸಮುದಾಯ ಬಾನುಲಿಗಳು ಕಾರ್ಯ ನಿರ್ವಹಿಸುತ್ತಿವೆ.

ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಭಾಗಕ್ಕೆ ಹೊಂದಿಕೊಂಡಿರುವ ಬೂದಿಕೋಟೆ ಗ್ರಾಮವು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನಲ್ಲಿದೆ. ಮೈರಾಡ ಸಂಸ್ಥೆಯು ಈ ಸಮುದಾಯ ಬಾನುಲಿ ಕೇಂದ್ರದ ಜವಾಬ್ದಾರಿ ಹೊತ್ತಿದೆ. ಸಮುದಾಯದ ಜನರ ಹಿತಕ್ಕಾಗಿ 'ನಮ್ಮ ಧ್ವನಿ' ಎಂಬ ಹೆಸರಿನಿಂದ ಗುರುತಿಸಿಕೊಂಡಿರುವ ಈ ಸಮುದಾಯ ಬಾನುಲಿ ಕೇಂದ್ರವು ತನ್ನದೇ ಆದ ರೆಕಾರ್ಡಿಂಗ್ ಸ್ಟುಡಿಯೋ, ಟ್ರಾನ್ಸ್ಮಿಷನ್ ವ್ಯವಸ್ಥೆ, ಕಂಪ್ಯೂಟರ್ ಸೌಲಭ್ಯಗಳನ್ನು ಮೂಲಕ ಇಂದು ಬೂದಿಕೋಟೆಯ ಪ್ರಬಲ ಮಾಧ್ಯಮವಾಗಿ ಬೆಳೆದಿದೆ.

90.4 ಕಂಪನಾಂಕಗಳಲ್ಲಿ ಪ್ರಸಾರವಾಗುವ ಬೂದಿಕೋಟೆಯ ಈ ರೇಡಿಯೋ ಕೇಂದ್ರವು ತನ್ನ ಸಮುದಾಯದ ಎಲ್ಲ ಜನರಿಗೂ ರೇಡಿಯೋ ಬಳಕೆಗೆ ಮುಕ್ತ ಅವಕಾಶ ಕಲ್ಪಿಸಿದೆ. ಎಲ್ಲ ವರ್ಗದ ಎಲ್ಲ ವಯೋಮಾನದ ಜನರು ರೇಡಿಯೋ ಸೇವೆ ಪಡೆಯುತ್ತಿದ್ದಾರೆ. ಶಿಕ್ಷಣ, ಆರೋಗ್ಯ, ಕೃಷಿ, ತಂತ್ರಜ್ಞಾನ, ನೈರ್ಮಲ್ಯ, ತ್ಯಾಜ್ಯ ವಿಲೇವಾರಿ, ಸ್ವಚ್ಚತೆ ಹೀಗೆ ಅನೇಕ ವಿಷಯದ ಮಾಹಿತಿ ನೀಡುತ್ತಿದೆ. ಈ ಸಮುದಾಯ ಬಾನುಲಿ ಕೇಂದ್ರ ಭಾರತದ ಮೊದಲ ಕೇಬಲ್ ಕಮ್ಯುನಿಟಿ ರೇಡಿಯೋ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

'ನಮ್ಮ ಧ್ವನಿ' ಸಮುದಾಯ ಬಾನುಲಿಗೂ ಮುಂಚೆ ಬೂದಿಕೋಟೆ ಹಳ್ಳಿಯಲ್ಲಿ ಆಕಾಶವಾಣಿಯೊಂದೇ ಪ್ರಸಾರವಾಗುತ್ತಿತ್ತು. ಆದರೆ ಆಕಾಶವಾಣಿಯ ಕಾರ್ಯಕ್ರಮಗಳು ಈ ಭಾಗದ ಜನರಿಗೆ ಹೆಚ್ಚು ಹೊಂದಿಕೆಯಾಗುತ್ತಿರಲಿಲ್ಲ. ಹಾಗಾಗಿ ಈ ಭಾಗಕ್ಕೆ ಸಮುದಾಯ ಬಾನುಲಿ ಕೇಂದ್ರದ ಅವಶ್ಯಕತೆ ಇದೆ ಎನ್ನುವುದು ಆ ಊರಿನಲ್ಲಿ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿದ್ದ ಮೈರಾಡ ಎನ್‌ಜಿಒ ಸಂಸ್ಥೆಯ ಅರಿವಿಗೆ ಬಂದಿತು.

## ಮೂರು ಸಂಸ್ಥೆಗಳ ಸಹಯೋಗದಲ್ಲಿ ಮುನ್ನಡೆಯುತ್ತಿದೆ ನಮ್ಮ ಧ್ವನಿ

ಮಾಧ್ಯಮ ಬಳಸಿಕೊಂಡು ಜನರನ್ನು ತಲುಪಬೇಕು ಎನ್ನುವ ಆಲೋಚನೆಯಿಂದ ರೇಡಿಯೋ ಸ್ಥಾಪಿಸಬೇಕೆಂದು ಆಲ್ ಇಂಡಿಯಾ ರೇಡಿಯೋ ಮತ್ತು ವಾಯ್ಸಸ್ ಜೊತೆ ಸೇರಿ ಮೈರಾಡ ಸಂಸ್ಥೆಯು ಸ್ವಯಂಸೇವಕ ಯುವಕ ಯುವತಿಯರನ್ನು ಸೇರಿಸಿಕೊಂಡು ಸಮುದಾಯಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಆದರೆ ಕಾರ್ಯಕ್ರಮವನ್ನು ಪ್ರಸಾರ ಮಾಡಲು ಮತ್ತು ಪರವಾನಗಿ ಪಡೆಯಲು ಹೆಚ್ಚಿನ ಹಣದ ಅವಶ್ಯಕತೆ ಬೇಕಿತ್ತು. ಹಾಗಾಗಿ ಬ್ರಾಡ್‌ಕಾಸ್ಟಿಂಗ್ ಬದಲು ನ್ಯಾರೋಕಾಸ್ಟಿಂಗ್ ತಂತ್ರಜ್ಞಾನದ ಮೂಲಕ ಕಾರ್ಯಕ್ರಮದ ಪ್ರಸಾರ ಮಾಡಿದರು. ಈ ಕಾರ್ಯಕ್ರಮಗಳು 35 ಹಳ್ಳಿಗಳ 60 ಸ್ವಸಹಾಯ ಗುಂಪುಗಳನ್ನು ತಲುಪುತ್ತಿತ್ತು. ಜನರು ಗುಂಪು ಗುಂಪಾಗಿ ಕೂತು ಕಾರ್ಯಕ್ರಮವನ್ನು ಆಲಿಸುತ್ತಿದ್ದರಿಂದ ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆಯು ಮೂಡಿ ಬಂದಿತು.

2001 ರಲ್ಲಿ ಯುನೆಸ್ಕೊ ಸಂಸ್ಥೆಯು ರೇಡಿಯೋ ಸ್ಥಾಪಿಸಲು ಆರ್ಥಿಕ ಸಹಾಯ ನೀಡಲು ಮುಂದಾಯಿತು. ಮೈರಾಡ ಸಂಸ್ಥೆಯು ರೇಡಿಯೋ ಅಗತ್ಯ ಸೌಲಭ್ಯಗಳನ್ನು ಒದಗಿಸಿದೆ. ವಾಯ್ಸಸ್ ಸಂಸ್ಥೆಯು ರೇಡಿಯೋ ನಿರ್ವಹಣೆಗೆ ಬೇಕಾದ ತಾಂತ್ರಿಕ ಸಹಾಯಕರನ್ನು ನೇಮಿಸಿದೆ. ನಮ್ಮ ಧ್ವನಿ ವ್ಯವಸ್ಥಾಪಕ ಸಮಿತಿ (ಎನ್‌ಡಿಎಂಸಿ)ಯ ಸ್ವಸಹಾಯ ತಂಡವು ಸಮುದಾಯ ಬಾನುಲಿಯ ಕಾರ್ಯಚಟುವಟಿಕೆಗಳ ಜವಾಬ್ದಾರಿ ಹೊತ್ತಿದೆ.

**ಸಮೀಕ್ಷೆ ಮೂಲಕ ಸ್ಥಳಿಯ ಸಮುದಾಯಕ್ಕೆ ಬೇಕಾದ ಕಾರ್ಯಕ್ರಮ ನಿರ್ಮಾಣ**

ಬೂದಿಕೋಟೆ ಗ್ರಾಮದಲ್ಲಿನ ಶಾಲಾಮಕ್ಕಳು, ಪೋಷಕರು, ಶಿಕ್ಷಕರು ಮತ್ತು ಸಮುದಾಯದ ಜನರ ಸಮೀಕ್ಷೆ ನಡೆಸಿ ಎನ್‌ಡಿಎಂಸಿ ತಂಡವು ಇಲ್ಲಿನ ಸಮುದಾಯಕ್ಕೆ ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ನಿರ್ಧರಿಸಿದವು.

ಸಮುದಾಯದ ಜನರನ್ನೇ ಬಳಸಿಕೊಂಡು ವಿವಿಧ ವಿಚಾರಗಳನ್ನು ಆಯ್ಕೆ ಮಾಡಿಕೊಳ್ಳುತ್ತ ಸಂದರ್ಶನಗಳನ್ನು ಮಾಡುವ ಮೂಲಕ ಆರಂಭವಾದ ಮೊದಲ ವರ್ಷದಲ್ಲೇ 250 ಕ್ಕೂ ಹೆಚ್ಚಿನ ಕಾರ್ಯಕ್ರಮಗಳನ್ನು ಬಾನುಲಿ ಕೇಂದ್ರವು ಯಶಸ್ವಿಯಾಗಿ ನಡೆಸಿದೆ. ಈ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ, ಹೆಚ್ಚಿನ ಜನರು ಸೇರುವ ಸ್ಥಳಗಳಲ್ಲಿ ಪ್ರಸಾರ ಮಾಡಲಾಗುತ್ತಿತ್ತು.

2002 ರಲ್ಲಿ ಸ್ಥಳೀಯ ಕೇಬಲ್ ಆಪರೇಟರ್‌ಗಳ ಸಹಾಯದಿಂದ ಕೇಬಲ್ ಮೂಲಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತಿತ್ತು. ಇದು ಬಾನುಲಿಯ ಮಹತ್ವದ ನಿರ್ಧಾರ ಮತ್ತು ಇದರಿಂದಾಗಿ ನೇರಪ್ರಸಾರದ ಕಾರ್ಯಕ್ರಮಗಳನ್ನೂ ಕೂಡ ನೆಡೆಸುಕೊಡುವಂತಾಯಿತು. ಕೇಬಲ್ ಕಾಸ್ಟಿಂಗ್‌ನಿಂದಾಗಿ ದಿನಕ್ಕೆ ಎರಡು ಬಾರಿ ಎರಡು ಗಂಟೆಯ ಕಾರ್ಯಕ್ರಮಗಳನ್ನೂ ಕೂಡ ಯಶಸ್ವಿಯಾಗಿ ನಡೆದವು. ಈ ಮೂಲಕ ಮನೆಗಳಲ್ಲಿ ಯಾರ್ಯಾರು ಕೇಬಲ್ ಮೂಲಕ ಟಿವಿ ನೋಡುತ್ತಿದ್ದರೋ ಅವರುಗಳು ಅದೇ ಕೇಬಲ್ ಮೂಲಕವೇ ರೇಡಿಯೋವನ್ನು ಕೂಡ ಕೇಳುವಂತಾದರು.

**ಸ್ಥಳಿಯ ಯುವಕರಿಗೆ ಶಿಕ್ಷಣ ನೀಡುವ ಕಾರ್ಯಕ್ರಮಗಳ ಪ್ರಸಾರ**

ಯುವಕರಿಗೆ ಹೆಚ್ಚಿನ ಆದ್ಯತೆ ನೀಡಿ ಯುವಕರನ್ನೇ ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮಗಳನ್ನು ಮಾಡುವ ಮೂಲಕ ಯುವಜನತೆಯಲ್ಲಿ ರೇಡಿಯೋ ಅರಿವು ಮೂಡಿಸಲಾಯಿತು. ಯುವಕರಲ್ಲಿ ಚೈತನ್ಯ ತುಂಬುವ, ಯುವ ಪ್ರತಿಭೆಗಳನ್ನು ಗುರುತಿಸುವ, ಯುವಕರಲ್ಲಿ ಸಕಾರಾತ್ಮಕ ಭಾವನೆಗಳನ್ನು ಬಿತ್ತುವ ಕಾರ್ಯಕ್ರಮಗಳು ಅಲ್ಲಿಯ ಅನೇಕ ಯುವಕರನ್ನು ರೇಡಿಯೋ ಕಡೆಗೆ ಸೆಳೆದವು.

ಕೋಲಾರದ ಕಂಪ್ಯೂಟರ್ ಶಿಕ್ಷಣ ಕೇಂದ್ರದ ಸಹಯೋಗದಲ್ಲಿ ಯುವಕರಿಗೆ ಕಂಪ್ಯೂಟರ್ ಕಲಿಕೆಗೆ ಅವಕಾಶ ಮಾಡಿಕೊಡಲಾಯಿತು. ಕಂಪ್ಯೂಟರ್‌ಗಳನ್ನೇ ನೋಡದ ಸಮುದಾಯದ ಯುವಕರು ಕಂಪ್ಯೂಟರ್ ಬಳಸುವಂತಾದರು. ಆರಂಭದಲ್ಲಿ ಹನ್ನೊಂದು ವಿದ್ಯಾರ್ಥಿಗಳಿಗೆ ಎರಡು ತಿಂಗಳ ಅವಧಿಯ ಕಂಪ್ಯೂಟರ್ ಕಲಿಕೆಗೆ ಅವಕಾಶ ಕಲ್ಪಿಸಲಾಯಿತು ನಂತರದ ದಿನಗಳಲ್ಲಿ 60 ಸ್ಥಳೀಯ ಮಕ್ಕಳಿಗೆ ಕಂಪ್ಯೂಟರ್ ಕಲಿಯಲು ಅವಕಾಶ ಮಾಡಿಕೊಡಲಾಯಿತು.

**ಸಮುದಾಯದ ಬೇಡಿಕೆಯಂತೆ ಕಾರ್ಯಕ್ರಮ**

ನಮ್ಮ ಧ್ವನಿ ರೇಡಿಯೋ ಯಶಸ್ಸಿಗೆ ಕಾರಣ ಕಾರ್ಯಕ್ರಮಗಳಿಗೆ ಬರುತ್ತಿದ್ದ ಪ್ರತಿಕ್ರಿಯೆಗಳು. ಪ್ರತಿ ಶುಕ್ರವಾರ 'ಲೆಟರ್ ಶೋ' ಮೂಲಕ ಸಮುದಾಯದ ಜನ ರೇಡಿಯೋಗೆ ಬರೆಯುತ್ತಿದ್ದ ಪತ್ರಗಳನ್ನು ಓದುವ ಕಾರ್ಯಕ್ರಮ ನಡೆಸಿಕೊಡಲಾಗುತ್ತಿದ್ದು. ಈ ಪತ್ರಗಳಲ್ಲಿ ಅನೇಕ ಹೊಸ ಹೊಸ ಕಾರ್ಯಕ್ರಮಗಳಿಗೆ ಬೇಡಿಕೆ, ಸಲಹೆ ಮತ್ತು ವಿಮರ್ಶೆಗಳಿರುತ್ತಿದ್ದವು. ಇನ್ನು ಕೆಲವು ಪತ್ರಗಳಲ್ಲಿ ಸಮುದಾಯದ ಪ್ರತಿಭೆಗಳು ಬರೆಯುತ್ತಿದ್ದ ಕಥೆ, ಕವನಗಳಿರುತ್ತಿದ್ದವು. ಇದರಿಂದಾಗಿ ಇನ್ನು ಹೆಚ್ಚಿನ ಗುಣಮಟ್ಟದ ಕಾರ್ಯಕ್ರಮಗಳನ್ನು ನಡೆಸಿಕೊಂಡುವಂತಾಯಿತು. ಇದರ ಜೊತೆಯಲ್ಲಿ ಮನೆಮನೆಗೂ ಹೋಗಿ ಸಮೀಕ್ಷೆಗಳನ್ನು ಮಾಡುವ ಮೂಲಕವು 'ನಮ್ಮ ಧ್ವನಿ' ಪ್ರತಿಕ್ರಿಯೆಗಳನ್ನು ಪಡೆಯಲಾಗುತ್ತಿತ್ತು. ಸಮುದಾಯದ ಜನರನ್ನು ಸೇರಿಸಿ ಸಭೆಗಳನ್ನು ಆಯೋಜಿಸಿ ಕಾರ್ಯಕ್ರಮಗಳನ್ನು ಕುರಿತು ಚರ್ಚೆಗಳನ್ನು ಮಾಡಲಾಗುತ್ತಿತ್ತು. ಇದರಿಂದ ಸಮುದಾಯಕ್ಕೆ ಬೇಕಾದ ಮಾಹಿತಿಗಳು ರೇಡಿಯೋ ಮೂಲಕ ಎಲ್ಲರನ್ನು ತಲುಪುವಂತಾಯಿತು. ಮಹಿಳೆಯರ ಕಾರ್ಯಕ್ರಮ ಮತ್ತು ಆರೋಗ್ಯದ ಕಾರ್ಯಕ್ರಮಗಳಿಗೆ ಹೆಚ್ಚು ಸ್ಪಂದನೆ ಸಿಗುತ್ತಿತ್ತು. ಜನರ ಅಭಿಪ್ರಾಯಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಸರ್ಕಾರದ ಗಮನಕ್ಕೆ ಬಂದ ಕಾರಣದಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರೆತಿದೆ.

**ಸಮುದಾಯದ ಜನರ ದನಿಯಾದ ನಮ್ಮ ಧ್ವನಿ**

ಬೂದಿಕೋಟೆ ವಲಯದಲ್ಲಿರುವ 3000 ಕುಟುಂಬಗಳಲ್ಲಿ 65% ನಷ್ಟು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ ಎಂದು ಮೈರಾಡ ಸಂಸ್ಥೆ 2000ದಲ್ಲಿ ನಡೆಸಿದ ಸಮೀಕ್ಷೆಯಿಂದ ತಿಳಿದು ಬಂದಿದ್ದು ಇಲ್ಲಿನವರು ಹೆಚ್ಚಾಗಿ ಕೃಷಿ ಮತ್ತು ಕೂಲಿ ಕಾರ್ಮಿಕರಾಗಿ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಬೂದಿಕೋಟೆಯು ಆಂಧ್ರ ಮತ್ತು ಕರ್ನಾಟಕದ ಗಡಿ ಭಾಗವಾಗಿದ್ದು ಈ ಭಾಗದಲ್ಲಿ ತೆಲುಗಿನ ಪ್ರಭಾವ ಕೂಡ ಹೆಚ್ಚಿದೆ. ಕನ್ನಡ ತೆಲುಗು ಮಿಶ್ರಿತ ಭಾಷೆಯನ್ನು ಮಾತನಾಡುವ ಜನರಿರುವುದರಿಂದಾಗಿ ಭಾಷೆಯ ಸಮಸ್ಯೆಯನ್ನು ಕೂಡ ಇಲ್ಲಿ ಕಾಣುತ್ತೇವೆ. ನಮ್ಮ ಧ್ವನಿ ರೇಡಿಯೋದಲ್ಲಿ ಸ್ಥಳಿಯ ಮಕ್ಕಳು ಪಾಲ್ಗೊಂಡ ಪರಿಣಾಮವಾಗಿ ಅನೇಕ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದ್ದಾರೆ. ಇದರ ಜೊತೆಗೆ ರೇಡಿಯೋದಲ್ಲಿ ಪ್ರಸಾರವಾದ ಕಾರ್ಯಕ್ರಮಗಳಿಂದ ಪ್ರಭಾವಿತರಾದ ಅನೇಕ ರೈತರು ಸಾವಯವ ಕೃಷಿಯತ್ತ ಒಲವನ್ನು ತೋರುತ್ತಿದ್ದಾರೆ.

ಸಮುದಾಯ ಬಾನುಲಿಯ ಅನುಕೂಲಗಳನ್ನು ಅರಿತ ಬೂದಿಕೋಟೆಯ ಜನರು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಬಾನುಲಿ ಸೂಕ್ತ ವೇದಿಕೆ ಎನ್ನುವುದನ್ನು ಅರಿತಿದ್ದಾರೆ. ಕೃಷಿ, ಆರೋಗ್ಯ, ಶಿಕ್ಷಣ, ಉದ್ಯೋಗ ಹೀಗೆ ಅನೇಕ ವಿಚಾರಗಳಿಗೆ ಸೂಕ್ತ ಸಲಹೆಗಳನ್ನು ರೇಡಿಯೋ ಮೂಲಕ ರೇಡಿಯೋಗೆ ಬರುವ ಸಂಪನ್ಮೂಲ ವ್ಯಕ್ತಿಗಳ ಮೂಲಕ ಪಡೆದುಕೊಳ್ಳುತ್ತಿದ್ದಾರೆ. ಮಕ್ಕಳಿಗಾಗಿ ಶೈಕ್ಷಣಿಕ ಕಾರ್ಯಕ್ರಮ, ಮಹಿಳೆಯರಿಗೆ ಸ್ವ–ಉದ್ಯೋಗ, ಆರೋಗ್ಯ, ಗ್ರಾಮೀಣ ನಿರ್ವಹಣೆ, ಜಲಾನಯನ ನಿರ್ವಹಣೆ, ಹೆಣ್ಣುಮಕ್ಕಳ ಶಿಕ್ಷಣ ಸೇರಿದಂತೆ ಗ್ರಾಮೀಣ ಸಂಸ್ಕೃತಿಯ ಮನೋರಂಜನಾ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತಿದೆ. ಈ ಬಾನುಲಿ ಕೇಂದ್ರವು ಪ್ರತಿದಿನ ಬೆಳಿಗ್ಗೆ 7ರಿಂದ 9 ರವರೆಗೆ, ಮಧ್ಯಾನ 12ರಿಂದ 2ಗಂಟೆಯವರೆಗೆ ಮತ್ತು ಸಂಜೆ 5 ರಿಂದ 9ರ ವರೆಗೆ ದಿನವೊಂದಕ್ಕೆ 9 ಗಂಟೆಗಳ ಕಾಲ ಪ್ರಸಾರವಾಗುತ್ತಿದೆ.

**ಮೈರಾಡ ಸಮುದಾಯ ಬಾನುಲಿ ಕೇಂದ್ರದಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳ ಪಟ್ಟಿ**

**ಬೆಳಗಿನ ಕಾರ್ಯಕ್ರಮಗಳು**

7:00 ರಿಂದ 7:30 ರವರೆಗೆ 'ಭಕ್ತಿ ಸುಧೆ'

7:30 ರಿಂದ 8:00 ರವರೆಗೆ 'ಕೃಷಿ ಖುಷಿ'

8:00 ರಿಂದ 8:30 ರವರೆಗೆ 'ಗ್ರಾಮ ದರ್ಶನ'

8:30 ರಿಂದ 9:00 ರವರೆಗೆ 'ಜಾನಪದ ಗೀತೆ'

**ಮಧ್ಯಾಹ್ನದ ಕಾರ್ಯಕ್ರಮಗಳು**

12:00 ರಿಂದ 12:30 ರವರೆಗೆ 'ಜಾನಪದ ಗೀತೆ'

12:30 ರಿಂದ 1:00 ರವರೆಗೆ 'ಜ್ಞಾನ ಗುರುಕುಲ'

1:00 ರಿಂದ 1:30 ರವರೆಗೆ 'ಕಾನೂನು ಸ್ಪಂದನೆ'

1:30 ರಿಂದ 2:00 ರವರೆಗೆ 'ಆರೋಗ್ಯ ಭಾಗ್ಯ'

**ಸಂಜೆಯ ಕಾರ್ಯಕ್ರಮಗಳು**

5:00 ರಿಂದ 5:30 ರವರೆಗೆ 'ಭಾವಗೀತೆ'

5:30 ರಿಂದ 6:00 ರವರೆಗೆ 'ಹಳ್ಳಿ ಸೊಗಡು'

6:00 ರಿಂದ 6:30 ರವರೆಗೆ 'ಆದರ್ಶ ವ್ಯಕ್ತಿಗಳ ಸಂದರ್ಶನ'

6:30 ರಿಂದ 7:00 ವರೆಗೆ 'ಮನೆ ಮದ್ದು'

7:00 ರಿಂದ 7:30 ವರೆಗೆ 'ಸ್ವಾವಲಂಬಿ ಮಹಿಳೆ'

7:30 ರಿಂದ 8:00 ವರೆಗೆ 'ನಳಪಾಕ ಶಾಲೆ'

8:00 ರಿಂದ 8:30 ವರೆಗೆ 'ಪುಟಾಣಿ ಲೋಕ'

8:30 ರಿಂದ 9:00 ವರೆಗೆ 'ಕೃಷಿ ಖುಷಿ'

**ಉಪಸಂಹಾರ**

ಚಿಕ್ಕದಾಗಿ ಪ್ರಾರಂಭವಾದ ಮೈರಾಡ ಸಮುದಾಯ ಬಾನುಲಿಯು ಇಂದು ಬೂದಿಕೋಟೆ ಸಮುದಾಯದ ಜನರ ಜೀವನ ಶೈಲಿಯನ್ನೇ ಬದಲಿಸಿದೆ. ಸಮುದಾಯದ ಜನರು ಬಾನುಲಿಯಲ್ಲಿ ಪ್ರಸಾರವಾಗು ಅನೇಕ ಜನಪರ ಕಾರ್ಯಕ್ರಮಗಳಿಂದ ಪ್ರಭಾವಿತರಾಗಿದ್ದಾರೆ. ಸಮುದಾಯ ಮೂಲಭೂತ ಸೌಲಭ್ಯಗಳಿಗೆ ತೊಡುಕಾಗದಂತಹ ವಾತವರಣವನ್ನು ತಾವೇ ನಿರ್ಮಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಸಮಾಜಕ್ಕೆ ಒಂದು ಮಾಧ್ಯಮದ ಸಾಧ್ಯತೆಗಳು ಏನೇನು ಎಂಬುದನ್ನು ಸಮುದಾಯ ಬಾನುಲಿ ನಿರೂಪಿಸಿದೆ. ಆರ್ಥಿಕ ನೆರವು, ಕಾನೂನಿನ ಚೌಕಟ್ಟು, ಕಾರ್ಯಕ್ರಮಗಳ ಮಿತಿ ಹೀಗೆ ಅನೇಕ ಸವಾಲು ಮತ್ತು ತೊಂದರೆಗಳು ಇದ್ದರೂ ಅವೆಲ್ಲವನ್ನು ದಾಟಿ ಸಮುದಾಯಕ್ಕಾಗಿ ರೇಡಿಯೋ ಮನಸ್ಸುಗಳು ಶ್ರಮಿಸುತ್ತಲೇ ಇದೆ. ಅನಕ್ಷರಸ್ಥರ ಆಪ್ತ ಮಾಧ್ಯಮವಾಗಿ ಗುರುತಿಸಿಕೊಂಡಿರುವ ರೇಡಿಯೋ ತನ್ಮೂಲಕ ಬದುಕಿನ ಸಾಕ್ಷರತೆಯನ್ನು ಸಾರುತ್ತಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಎಂಬಂಥಹ ತತ್ವ ಸಮುದಾಯ ಬಾನುಲಿಗೆ ಅನ್ವಯವಾಗುವುದನ್ನು ನಾವು ಮೈರಾಡ ನಮ್ಮಧ್ವನಿ ಸಮುದಾಯ ಬಾನುಲಿಯಲ್ಲಿ ಗುರುತಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


1. ಖಾನ್ ಎ ಡಬ್ಲ್ಯು (1987) ದ ರೋಲ್ ಆಫ್ ರೇಡಿಯೋ ಇನ್ ಡೆವಲಪ್‌ಮೆಂಟ್ ಕಮ್ಯುನಿಕೇಷನ್: ಎ ಕಂಟ್ರಿ ಕಸಿನ್ ಸಿಂಡ್ರೋಮ್, ಇನ್ ಕೆ.ಇ.ಈಪನ್ (ಸಂ), ದ ರೋಲ್ ಆಫ್ ರೇಡಿಯೋ ಇನ್ ಗ್ರೋತ್ ಅಂಡ್ ಡೆವಲಪ್‌ಮೆಂಟ್, ಬೆಂಗಳೂರು ಯೂನಿವರ್ಸಿಟಿ, ಬೆಂಗಳೂರು, ಇಂಡಿಯಾ.
2. ಡಾ.ನಾಗೇಂದ್ರ (2011) 'ರೇಡಿಯೋಧ್ವನಿ'
3. ಡಾ.ಬಿ.ಪಿ ಮಹೇಶಚಂದ್ರ ಗುರು (2014) 'ಅಭಿವೃದ್ಧಿ ಸಂವಹನ ಮತ್ತು ಪತ್ರಿಕೋದ್ಯಮ'
4. ಯುನೆಸ್ಕೊ (1961) ಮಾಸ್ ಮೀಡಿಯಾ ಇನ್ ದ ಡೆವೆಲಪಿಂಗ್ ಕಂಟ್ರೀಸ್, ಎ ರಿಪೋರ್ಟ್ ಸಬ್‌ಮಿಟೆಡ್ ಟು ದ ಯುನೈಟೆಡ್ ನೇಶನ್ಸ್ ಆರ್ಗನೈಸೇಶನ್ಸ್, ಪ್ಯಾರೀಸ್.
5. ರಾಮಿರೆಜ್, ಆರ್ (1998) ಕಮ್ಯುನಿಕೇಶನ್: ಎ ಮೀಟಿಂಗ್ ಗ್ರೌಂಡ್ ಫಾರ್ ಸಸ್ಟೈನೆಬಲ್ ಡೆವಲಪ್‌ಮೆಂಟ್, ರಿಚರ್ಡ್‌ಸನ್, ಡಿ ಮತ್ತು ಪೈಸ್ಲೆ, ಎಲ್ (ಸಂ) ದ ಫಸ್ಟ್ ಮೈಲ್ ಆಫ್ ಕನೆಕ್ಟಿವಿಟಿ, ಅಡ್ವಾನ್ಸಿಂಗ್ ಟೆಲಿಕಮ್ಯುನಿಕೇಷನ್ ಫಾರ್ ರೂರಲ್ ಡೆವೆಲಪ್‌ಮೆಂಟ್ ಥ್ರೂ ಎ ಪಾರ್ಟಿಸಿಪೇಟರಿ ಕಮ್ಯುನಿಕೇಶನ್ ಅಪ್ರೋಚ್, ರೋಮ್: ಎಫ್.ಎ.